ದಾವಣಗೆರೆ ಉದ್ದಿಮೆಗಳ ಬಗ್ಗೆ. ಈಗ ಉತ್ತರ ಕೊಟ್ಟು ವಿಜಯನಗರ ಉಕ್ಕಿನ ಕಾರ್ಖಾನೆ ಬಗ್ಗೆ ಎಂ.ಎಸ್. ಕೃಷ್ಣನ್ ಅವರ ಪ್ರಶ್ನೆಗೆ ಉತ್ತರ ಕೊಡುವಾಗ ಉತ್ತರ ಕೊಡುತ್ತೇನೆ.

ಶ್ರೀ ಪಂಪಾಪತಿ —ಮಾನ್ಯ ಮಂತ್ರಿಮಂತ್ರಿಗಳು ಇನ್ನು ಮುಂದೆ ಬೆಂಗಳೂರು ಸುತ್ತಮುತ್ತ ಎಲ್ಲೂ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಬೆಳೆಸದಂತೆ ತಡೆಗಟ್ಟುತ್ತೇವೆ ಎಂದು ಹೇಳಿದ್ದಾರೆ. ದಾವಣಗೆರೆ ರಾಜ್ಯದ ಮಧ್ಯಭಾಗದಲ್ಲಿರುವಕ್ಕ ದೊಡ್ಡ ನಗರ. ಆ ಭಾಗದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಪ್ರಯತ್ನಪಟ್ಟರೆ ಬಹಳ ಅನುಕೂಲವಾಗುತ್ತದೆ. ಆದ್ದರಿಂದ ದಯವಿಟ್ಟು ಈ ಬಗ್ಗೆ ಸರ್ಕಾರ ಗಮನ ಹರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ —ಗಮನ ಹರಿಸುತ್ತೇವೆ, ಯಾರಾದರೂ ಮುಂದೆ ಬಂದರೆ ಪ್ರೋತ್ಸಾಹ ಕೂಡ ಕೊಡುತ್ತೇವೆ.

ಶ್ರೀ ಪಂಪಾಪತಿ.—ಬೇರೆಯವರು ಮುಂದೆ ಬಂದರೆ ಪ್ರೋತ್ಸಾಹ ಕೂಡ ಕೊಡುವುದು ಬೇರೆ ವಿಷಯ. ಆದರೆ ಸರ್ಕಾರದ ವತಿಯಿಂದ ಕೊಡುವ ಪ್ರೋತ್ಸಾಹದ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು ಸರ್ಕಾರದ ವತಿಯಿಂದ ಅನೇಕ ಕೈಗಾರಿಕೆಗಳು ಬರುತ್ತಿರುವಾಗ ದಾವಣಗೆರೆ ಭಾಗದಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳುತ್ತಿದ್ದೇನೆ. ಅಲ್ಲಿ ಎಲ್ಲಾ ಅನುಕೂಲತೆಗಳು ಇರುವುದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇಲ್ಲಿ ಹೆದ್ದಾರಿ ಇದೆ, ಅಧಿಕಾರಿಗಳು ಬಂದರೆ ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಇದೆ, ವಾಣಿಜ್ಯ ವ್ಯವಸ್ಥೆ ಚೆನ್ನಾಗಿದೆ. ಹೀಗೆ ಎಲ್ಲಾ ವ್ಯವಸ್ಥೆ ಇರುವಕ್ಕ ದೊಡ್ಡ ನಗರವಾಗಿರುವುದರಿಂದ ಆ ಭಾಗದಲ್ಲಿ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ದಾವಣಗೆರೆ ಎಲ್ಲಾ ರೀತಿಯಲ್ಲೂ ಒಳ್ಳೆಯ ಸೌಕರ್ಯವಿರುವ ದೊಡ್ಡ ನಗರ ಎಂಬುದನ್ನು ಒಪ್ಪುತ್ತೇನೆ. ಆದರೆ ಈ ರಾಜ್ಯದಲ್ಲಿ ಕೈಗಾರಿಕೆಗಳಿಲ್ಲದ ಜಿಲ್ಲೆ ಎಂದು ಮೂರು ಜಿಲ್ಲೆಗಳನ್ನು ಆರಿಸಿದ್ದೇವೆ. ಏನೂ ಉದ್ದಿಮೆಗಳೇ ಇಲ್ಲದಿರುವಕ್ಕ ಜಿಲ್ಲೆ ಎಂದರೆ ಬೀದರ್, ಆ ಕಡೆ ಸರ್ಕಾರ ಹೆಚ್ಚು ಗಮನ ಕೊಡಬೇಕಾಗುತ್ತದೆ. ಸದ್ಯಕ್ಕೆ ಸರ್ಕಾರೀ ವಲಯದಲ್ಲಿ ಉದ್ದಿಮೆ ಸ್ಥಾಪಿಸುವ ಆವಶ್ಯಕತೆ ಇಲ್ಲ, ಅವಶ್ಯಕತೆ ಬಂದರೆ ಗಮನ ಹರಿಸುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಬೀದರ್ ಜಿಲ್ಲೆಯಲ್ಲಿ ಉದ್ದಿಮೆಗಳೇ ಇಲ್ಲ, ಅದು ಹಿಂದುಳಿದ ಜಿಲ್ಲೆ ಎಂದು ಹೇಳಿದ್ದೀರಿ. ದಾವಣಗೆರೆಯನ್ನು ಕರ್ನಾಟಕದ ರಾಜಧಾನಿಯನ್ನಾಗಿ ಮಾಡಬೇಕೆಂಬ ಐಡಿಯಾ ಇತ್ತು. ಆದ್ದರಿಂದ ಕೈಗಾರಿಕೆಗಳು ಹೆಚ್ಚು ಬೆಳೆಯದೇ ಇರುವ ಪ್ರದೇಶಕ್ಕೆ ಕೇಂದ್ರ ಸರ್ಕಾರದಿಂದ ಕೈಗಾರಿಕೆಗಳಿಗೆ ಲೈಸೆನ್ಸ್ ಕೇಳುವಾಗ ದಾವಣಗೆರೆ ಪ್ರದೇಶವನ್ನು ಶಿಫಾರಸು ಮಾಡ್ತೀರಾ ಎಂಬುದು ಮಾನ್ಯ ಸದಸ್ಯರ ಪ್ರಶ್ನೆ, ಆ ರೀತಿ ಮಾಡಿದರೆ ಅಲ್ಲಿ ಕೈಗಾರಿಕೆ ಬಂದೇ ಬರುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ದಾವಣಗೆರೆ ಬಂದೇ ಅಲ್ಲ ಕೈಗಾರಿಕೆಗಳನ್ನು ಎಲ್ಲಿ ಮಾಡುವುದಕ್ಕೆ ಬೇಡಿಕೆ ಇದ್ದರೂ ಪ್ರೋತ್ಸಾಹ ಕೊಡುತ್ತೇವೆ.

ಮೈಸೂರು ನಗರದಲ್ಲಿ ಲೋಕೋಪಯೋಗಿ ಇಲಾಖೆ ಮತ್ತು ನೀರಾವರಿ ಇಲಾಖೆಗೆ ಸಂಬಂಧಿಸಿದ ಕಛೇರಿ ಕಟ್ಟಡಗಳ ಬಗ್ಗೆ

೧೦೩. ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಮೈಸೂರು ನಗರದಲ್ಲಿ ಲೋಕೋಪಯೋಗಿ ಇಲಾಖೆಗಳು ಮತ್ತು ನೀರಾವರಿ ಇಲಾಖೆಗೆ ಸಂಬಂಧಿಸಿದ ಎಷ್ಟು ಕಚೇರಿಗಳಿವೆ.

ಆ) ಅವುಗಳಲ್ಲಿ ಎಷ್ಟು ಕಚೇರಿಗಳಿಗೆ ಸ್ವಂತ ಕಟ್ಟಡಗಳಿವೆ, ಎಷ್ಟು ಕಚೇರಿಗಳು ಬಾಡಿಗೆ ಕಟ್ಟಡದಲ್ಲಿವೆ, ತಿಂಗಳಿಗೆ ಎಷ್ಟು ಬಾಡಿಗೆ ಕೊಡಲಾಗುತ್ತಿದೆ.

ಇ) ಎಲ್ಲಾ ಸರಕಾರಿ ಇಲಾಖೆಗಳನ್ನು ಸ್ವಂತ ಕಟ್ಟಡದಲ್ಲಿ ವ್ಯವಸ್ಥೆ ಮಾಡುವ ಯೋಜನೆಯನ್ನೇ ನಾದರೂ ಸರಕಾರ ರೂಪಿಸಿದೆಯೆ, ಹಾಗಿದ್ದರೆ ಅದರ ಅಂದಾಜೆಷ್ಟು ?

ಶ್ರೀ ಹೆಚ್.ಡಿ. ದೇವೆಗೌಡರು (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಎ) ಮೈಸೂರು ನಗರದಲ್ಲಿ ಲೋಕೋಪಯೋಗಿ ಹಾಗೂ ನೀರಾವರಿ ಇಲಾಖೆಗೆ ಸಂಬಂಧಿಸಿದ ೧೪ (ಹದಿನಾಲ್ಕು) ಕಚೇರಿಗಳಿವೆ.

ಬಿ) ೫ (ಐದು) ಕಚೇರಿಗಳಿಗೆ ಸ್ವಂತ ಕಟ್ಟಡಗಳಿದ್ದು, ೯ (ಒಂಬತ್ತು) ಕಚೇರಿಗಳು ಬಾಡಿಗೆ ಕಟ್ಟಡಗಳಲ್ಲಿವೆ. ಬಾಡಿಗೆಗೆ ಪಡೆದಿರುವ ಕಟ್ಟಡಗಳಿಗೆ ತಿಂಗಳಿಗೆ ೧೦,೯೪೨–೦೦ ಹತ್ತು ಸಾವಿರದ ಒಂಭೈನೂರ ನಲವತ್ತೆರಡು) ರೂಪಾಯಿಗಳು ಬಾಡಿಗೆ ಕೊಡಲಾಗುತ್ತಿದೆ.

ಸಿ) ಜಿಲ್ಲಾಮಟ್ಟದ ಹಾಗೂ ತಾಲ್ಲೂಕು ಮಟ್ಟದ ಕಚೇರಿಗಳಿಗಾಗಿ ಪ್ರತ್ಯೇಕವಾಗಿ ಒಂದು ಸಂಯೋಜಿತ (ಕಾಂಪ್ಲೆಕ್ಸ್) ಕಟ್ಟಡ ತಯಾರಿಸಲಾಗುತ್ತಿದೆ ಮತ್ತು ಅನುಕ್ರಮವಾಗಿ ಅಂದಾಜುಗಳು ೧೭೧ ಲಕ್ಷ ಹಾಗೂ ೨೧.೫ ಲಕ್ಷ ರೂ. ಗಳಾಗಿವೆ.

ಶ್ರೀ ಎಚ್. ಗಂಗಾಧರನ್.—ಲೋಕೋಪಯೋಗಿ ಇಲಾಖೆಗೆ ಅರಮನೆಗೆ ಸೇರಿದಂಥ ಕಟ್ಟಡ ಇದೆ. ಅದರಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದಂಥ ಬೇರೆ ಬೇರೆ ಇಲಾಖೆಗಳಿವೆ. ಆದ್ದರಿಂದ ಅದನ್ನೆಲ್ಲಾ ತೆಗೆದು ಲೋಕೋಪಯೋಗಿ ಇಲಾಖೆಯ ಎಲ್ಲಾ ಕಚೇರಿಗಳೂ ಒಂದೇ ಕಟ್ಟಡದದ ಇರುವಂತೆ ಮಾಡುವುದಕ್ಕೆ ಸಾಧ್ಯವೆ ? ವಿಧಾನಸೌಧದಂತೆ ಜಿಲ್ಲಾ ಕಚೇರಿಗಳನ್ನು ಕಟ್ಟುವ ಯೋಜನೆ ಇತ್ತು. ಅದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಶ್ರೀ ಎಚ್.ಡಿ. ದೇವೇಗೌಡ.—ಅರಮನೆಗೆ ಸಂಬಂಧಪಟ್ಟ ಕಟ್ಟಡವನ್ನು ನಾವು ತೆಗೆದುಕೊಂಡು ಅದರಲ್ಲಿ ಕೆಲವು ಕಚೇರಿಗಳನ್ನು ನಡೆಸುತ್ತಿದ್ದೇವೆ. ಎಲ್ಲ ಕಚೇರಿಗಳನ್ನೂ ಒಂದೇ ಕಡೆ ತೆರೆಯುವುದಕ್ಕೆ ಸಾಧ್ಯವೇ ಎಂಬುದನ್ನು ಪರಿಶೀಲನೆ ಮಾಡುತ್ತೇವೆ, ಮೈಸೂರಿಗೆ ಬಂದಿದ್ದಾಗಲೂ ನಾವು ಈ ಅಭಿಪ್ರಾಯವನ್ನು ಕೊಟ್ಟಿದ್ದೀವಿ. ಎರಡನೆಯದಾಗಿ ಜಿಲ್ಲಾ ಮಟ್ಟದಲ್ಲಿ ಮಿನಿ ವಿಧಾನಸೌಧವನ್ನು ಕಟ್ಟುವುದು ಸರ್ವ ಸಂಪನ್ಮೂಲವನ್ನು ಅವಲಂಬಿಸಿರುತ್ತದೆ. ಆದರ ಬಗ್ಗೆ ನಿಖರವಾಗಿ ಈಗ ಹೇಳುವುದು ಕಷ್ಟವಾಗುತ್ತದೆ.

ಶ್ರೀ ಎಚ್. ಗಂಗಾಧರನ್.—ಅಧ್ಯಕ್ಷರೇ, ಡಿಸ್ಟ್ರಿಕ್ಟ್ ಆಫೀಸ್ ಬಿಲ್ಡಿಂಗ್ ಹಳೇ ಬಿಲ್ಡಿಂಗ್ ಆಗಿದೆ ಈಗ ಕೊಡುತ್ತಿರುವ ಬಾಡಿಗೆಯ ಹತ್ತು ವರ್ಷದಷ್ಟು ಬಾಡಿಗೆ ಹಣದಲ್ಲಿ ಬೇರೆ ಒಂದು ವ್ಯವಸ್ಥೆ ಮಾಡಬಹುದಾಗಿದೆ, ಈ ಬಗ್ಗೆ ಎಸ್ಟಿಮೇಟ್ ಕೂಡ ಆಗಿತ್ತು ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ನಾವು ನಮ್ಮ ಸಂಪನ್ಮೂಲಗಳನ್ನು ಅವಲಂಬಿಸಿ ಕೆಲಸ ಮಾಡಬೇಕಾಗುತ್ತದೆ. ಈಗಾಗಲೇ ಅರಣ್ಯ ಇಲಾಖೆ ಹಾಗೂ ನ್ಯಾಯಾಲಯದ ಬಗ್ಗೆ ೮೦ ಲಕ್ಷ ರೂಪಾಯಿಗಳಿಗೆ ಆಡಳಿತದ ಮಂಜೂರಾತಿ ಕೊಡಲಾಗಿದೆ. ಜಿಲ್ಲಾ ಕಾಂಪ್ಲೆಕ್ಸ್ ಬಿಲ್ಡಿಂಗ್‌ಗೆ ೧೭೧ ಲಕ್ಷ ರೂಪಾಯಿಗಳು ಆಗುತ್ತದೆ. ಈ ಬಗ್ಗೆ ಸರ್ಕಾರ ಹಣ ಒದಗಿಸಿಲ್ಲ.

ಶ್ರೀ ಕೆಂಪೇಗೌಡ.—ಮೈಸೂರಿನಲ್ಲಿ ವಿಶ್ವ ಕನ್ನಡ ಸಮ್ಮೇಳನಕ್ಕಾಗಿ ಕಟ್ಟಡಗಳನ್ನು ಕಟ್ಟಲಾಗುತ್ತಿದೆ. ಇಲ್ಲಿ ಸುಮಾರು ೭–೮ ದೊಡ್ಡ ಕಟ್ಟಡಗಳನ್ನು ಕಟ್ಟುತ್ತಿದ್ದಾರೆ. ವಿಶ್ವ ಕನ್ನಡ ಸಮ್ಮೇಳನ ಮುಂಗಿದ ಮೇಲೆ ಅವನ್ನು ಈ ಬಾಬ್ತಿಗೆ ಉಪಯೋಗಿಸಿಕೊಳ್ಳುತ್ತೀರಾ ?

ಶ್ರೀ ಎಚ್.ಡಿ. ದೇವೇಗೌಡ.—ವಿಶ್ವ ಕನ್ನಡ ಸಮ್ಮೇಳನವನ್ನು ಬಹಳ ಸರಳವಾಗಿ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ಪರಿಶೀಲನೆ ಮಾಡಲಾಗುವುದು.

ಕೃಷ್ಣ ಮೇಲ್ದಂಡೆ ಯೋಜನೆ ಕಾಲುವೆ ವಲಯಕ್ಕೆ ೧೯೮೨–೮೩ನೇ ಸಾಲಿನ ಬಡ್ಜೆಟ್‌ನಲ್ಲಿ ಕೊಟ್ಟ ಹಣ.

೧೦೪ ಶ್ರೀ ಬಾಪುಗೌಡ ದರ್ಶನಾಪುರ (ಶಹಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ.